# ಕ್ಲಿಷ್ಟ ವಿಷಯಗಳ ಅಭ್ಯಾಸ



■ ಅರವಿಂದ ಚೊಕ್ಕಾಡಿ

ಕಲಿಯಬೇಕೆಂಬ ಮನೋಭಾವ ವಿದ್ಯಾರ್ಥಿಗಳಿಗಿರುತ್ತದೆ. ಯಾವಾಗ ಪರೀಕ್ಷೆಗಾದಾಗ ಓದಿಕೊಂಡರೆ ಸಾಕಪ್ಪಾ ಎನಿಸುವುದು ಹೇಳಿ ನೋಡೋಣ?. ಅಧ್ಯಯನ ನಡೆಸುವಾಗ ಎಲ್ಲೋ ಕಷ್ಟದ ವಿಷಯ ಬರುತ್ತದೆ. ಒಂದೆರಡು ಸಲ ನೋಡಿಕೊಂಡಾಗಲೂ ಅರ್ಥವಾಗುವುದಿಲ್ಲ. ಆಗ ನಾಳೆ ನೋಡೋಣ ಎನಿಸುತ್ತದೆ. ನಾಳೆಯಾದಾಗ ಓದಿದರೂ ಅರ್ಥವಾಗುವುದಿಲ್ಲ ಎನ್ನುವ ಒಳಪ್ರಜ್ಞೆ 'ಓದಿದರಾಯಿತು' ಎನ್ನುವಂತೆ ಮಾಡುತ್ತದೆ. ಆಗ ಕಷ್ಟದ್ದನ್ನು ಅಧ್ಯಯನ ಮಾಡುವಾಗ ಸುಲಭವಿರುವುದನ್ನೂ ಓದಿಕೊಂಡರಾಯಿತು ಎಂಬ ತೀರ್ಮಾನ ಬಲಿತು ಪರೀಕ್ಷೆಯ ಸಮಯಕ್ಕೆ ಅಧ್ಯಯನದ ಹೊರೆ ಹೆಚ್ಚಾಗುತ್ತಾ ಹೋಗುತ್ತದೆ. ಈ ರೀತಿ ಆಗಬಾರದಲ್ಲವೆ? ಹಾಗಿದ್ದರೆ ಕ್ಲಿಷ್ಟ ವಿಷಯಗಳನ್ನು ತಿಳಿದುಕೊಳ್ಳುವುದು ಹೇಗೆ ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು.

ಕಾರಣಗಳು: ವಿದ್ಯಾರ್ಥಿಗಳಿಗೆ ಕಷ್ಟದ ವಿಷಯಗಳು ಎನಿಸುವುದರಲ್ಲಿ ಎರಡು ರೀತಿಯದಿರುತ್ತದೆ.

**1.** ವಿಷಯವೆ ಕಷ್ಟವೆನಿಸುವುದು: ವಿಷಯವನ್ನು ಬೋಧಿಸುವ ಅಧ್ಯಾಪಕರ ಮೇಲೆ ವಿದ್ಯಾರ್ಥಿಗೆ ಸದ್ಭಾವನೆ ಇಲ್ಲದಿದ್ದರೆ ಆಗ ಆ ವಿಷಯವೇ ಕಷ್ಟವೆನಿಸುತ್ತದೆ. ಹಾಗೆಯೇ ಪ್ರತಿಯೊಬ್ಬ ವಿದ್ಯಾರ್ಥಿಗೂ ವ್ಯಕ್ತಿತ್ವವಿರುತ್ತದೆ. ಕೆಲವು ವ್ಯಕ್ತಿತ್ವಕ್ಕೆ ಕೆಲವು ವಿಷಯಗಳ ಬಗ್ಗೆ ವಿಶೇಷ ಆಸಕ್ತಿ ಬರುವುದಿಲ್ಲ. ಉದಾಹರಣೆಗೆ ಗಣಿತ ತುಂಬ ಇಷ್ಟವಾಗುವವರಿಗೆ ಇತಿಹಾಸ ಇಷ್ಟವಾಗದಿರುವುದು, ಇತಿಹಾಸ ಇಷ್ಟವಾಗುವವರಿಗೆ ರಸಾಯನ ಶಾಸ್ತ್ರ ಇಷ್ಟವಾಗದಿರುವುದು – ಹೀಗೆ ವ್ಯಕ್ತಿತ್ವದ ಆಸಕ್ತಿಯ ಪರಿಣಾಮಗಳು. ಆದರೆ, ಇದು ಅಂಕ ಗಳಿಕೆಗೆ ತೊಂದರೆ ಕೊಡುವಂತಹ ಅನಾಸಕ್ತಿಗಳಾಗಿರುವುದಿಲ್ಲ. ವಿಷಯದ ಮೇಲೆ ಪ್ರಭುತ್ವವನ್ನು ಹೊಂದುವುದಕ್ಕೆ ಪರಿಣಾಮ ಬೀರುವ ಅನಾಸಕ್ತಿಯಾಗಿರುತ್ತದೆ.

**2.** ಒಂದು ಪಠ್ಯ ವಿಷಯದಲ್ಲಿ ಕೆಲವು ಭಾಗಗಳು ಕಷ್ಟವೆನಿಸುವುದು. ಹೆಚ್ಚಿನ ವಿದ್ಯಾರ್ಥಿಗಳು ಈ ಸಮಸ್ಯೆಯನ್ನು ಎದುರಿಸುತ್ತಾರೆ.

ಈ ಕ್ಲಿಷ್ಟತೆಗೆ ಮುಖ್ಯ ಕಾರಣ ಕಲಿತುಕೊಳ್ಳಬೇಕಾದ ಆ ಭಾಗದ ಕಲಿಕೆಗೆ ಅಗತ್ಯವಾದ ಹಿಂದಿನ ಕಲಿಕೆ ಸರಿಯಾಗಿ ಆಗಿಲ್ಲದಿರುವುದು. ಉದಾಹರಣೆಗೆ 'ಷ' ಮತ್ತು 'ಶ'ವನ್ನು ಎಲ್ಲಿ ಬಳಸಬೇಕೆಂದು ಗೊತ್ತಾಗದಿರುವುದು. ಯಾವ ಶಬ್ದದಲ್ಲಿರುವ 'ಷ'ವನ್ನು ಉಚ್ಚರಿಸುವಾಗ ನಾಲಗೆಯನ್ನು ಒಳಗೆ ಮಡಿಸಿ 'ಷ'ವನ್ನು ಉಚ್ಚರಿಸಬೇಕೊ ಅಲ್ಲೆಲ್ಲ 'ಷ'ವನ್ನು ಬಳಸಬೇಕು. ಯಾವ 'ಶ'ವನ್ನು ಉಚ್ಚರಿಸುವಾಗ ನಾಲಗೆಯನ್ನು ಒಳಗೆ ಮಡಿಸಬೇಕಾಗಿಲ್ಲವೊ ಅಲ್ಲೆಲ್ಲ 'ಶ'ವನ್ನು ಬಳಸಬೇಕು. ಇಷ್ಟು ಗೊತ್ತಾಗಿಬಿಟ್ಟರೆ ಆಮೇಲೆ 'ಷ', 'ಶ'ದ ಬರವಣಿಗೆಯ ಸಮಸ್ಯೆ ಹೊರಟು ಹೋಗುತ್ತದೆ.

ಕೆಲವರಿಗೆ ಭಾರತದ ಇತಿಹಾಸ ಹೇಗೋ ಅರ್ಥವಾಗುತ್ತದೆ. ಯೂರೋಪಿನ ಇತಿಹಾಸ ಏನು ಮಾಡಿದರೂ ಅರ್ಥವಾಗುವುದಿಲ್ಲ. ಏಕೆಂದರೆ ಅವನಿಗೆ ಯೂರೋಪಿನ ನಕಾಶೆ ಅರ್ಥವಾಗಿರುವುದಿಲ್ಲ. ನಕಾಶೆ ಅರ್ಥವಾಗದಿರಲು ಮುಖ್ಯ ಕಾರಣ ದಿಕ್ಕುಗಳು ಅರ್ಥವಾಗದಿರುವುದು. 'ದೆಹಲಿ ಎಲ್ಲಿದೆ?' ಎಂದು ಕೇಳಿದರೆ ಅವನು 'ಮೇಲೆ ಇದೆ' ಎನ್ನುತ್ತಾನೆಯೇ ಹೊರತು 'ಉತ್ತರದಲ್ಲಿದೆ' ಎನ್ನುವುದಿಲ್ಲ. ಸ್ಥಳೀಯತೆಯ ಸೊಗಡು ಇರುವುದರಿಂದ ಭಾರತದ ಇತಿಹಾಸ ಅರ್ಥವಾಗಿರುತ್ತದೆ. ಆದರೆ ಯೂರೋಪಿಗಾದಾಗ ಸ್ಥಳೀಯತೆಯ ಸೊಗಡು ಇಲ್ಲ. ಆದ್ದರಿಂದ ಅರ್ಥವಾಗುವುದಿಲ್ಲ. ಇತಿಹಾಸ ಅರ್ಥವಾಗಬೇಕಾದರೆ ಭೂಪ್ರದೇಶ ಮತ್ತು ಕಾಲಮಾನ ಇವೆರಡರ ಕಲ್ಪನೆ ಸರಿಯಾಗಿ ಇರಬೇಕು. ದಿಕ್ಕುಗಳ ಸಮರ್ಪಕ ತಿಳಿವಳಿಕೆ ಇಲ್ಲದೆ ಭೂಪ್ರದೇಶ ಅರ್ಥವಾಗುವುದಿಲ್ಲ. ಅದೇ ರೀತಿ ಕೂಡಿಸು, ಕಳೆ, ಗುಣಿಸು, ಭಾಗಿಸುವುದರ ಎಲ್ಲ ರೂಪಗಳೂ ಅರ್ಥವಾಗದಿದ್ದರೆ ಗಣಿತ ಅಲ್ಲಲ್ಲಿ ಕಷ್ಟವಾಗುತ್ತದೆ. ಪರಮಾಣುಗಳು ಅರ್ಥವಾಗದಿದ್ದರೆ ವಿಜ್ಞಾನ ಅಲ್ಲಲ್ಲಿ ಕಷ್ಟವಾಗುತ್ತದೆ. ಆದ್ದರಿಂದ ನೀವು ಅಭ್ಯಾಸ ಮಾಡುವ ವಿಷಯಗಳ ಮೂಲತತ್ವಗಳನ್ನು ನಿಮ್ಮ ಅಧ್ಯಾಪಕರ ಬಳಿ ಕೇಳಿ ಸಮರ್ಪಕವಾಗಿ ಅರ್ಥ ಮಾಡಿಕೊಳ್ಳಿ. ಆಮೇಲೆಯೂ ಕಷ್ಟಕರ ಎನಿಸುವಂತಾದ್ದು ಇರುತ್ತದೆ. ಅದನ್ನು ಹೇಗೆ ಅಭ್ಯಾಸ ಮಾಡಬೇಕೆಂದು ನೋಡೋಣ.

## ಹಿಮ್ಮುಖ ಚಲನೆ

ಯಾವ ವಿಷಯವು ಕ್ಲಿಷ್ಟ ಎನಿಸುತ್ತದೆಯೊ ಅದಕ್ಕೆ ಪೂರಕವಾಗಿರುವ ಹಿಂದಿನ ಕಲಿಕೆಯನ್ನು ನೆನಪು ಮಾಡಿಕೊಂಡು ಅದಕ್ಕೂ ಇದಕ್ಕೂ ಇರುವ ವ್ಯತ್ಯಾಸವನ್ನು ಯೋಚಿಸಬೇಕು. ಆಗ ಕ್ಲಿಷ್ಟ ವಿಷಯ ಅರ್ಥವಾಗುತ್ತದೆ. ಉದಾಹರಣೆಗೆ 'ಮೆಟಾಫರ್'ನ ವಿವರಣೆ ಕೊಟ್ಟು 'he was lion in the battle field' ಎಂದು ಉದಾಹರಣೆ ಕೊಟ್ಟಿರುತ್ತಾರೆ. ನಿಮಗೆ ಅರ್ಥವಾಗುವುದಿಲ್ಲ.